**ಒ ಎಸ್ ನಂ. 46/2024**
**ಪಿ ಡಬ್ಲ್ಯೂ: 01**

**ದಿ: 27-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ನಂ 1 ರವರ ಪರ:**

ಏನು ಇಲ್ಲ.

**ಪಾಟೀ ಸವಾಲು: 3 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ಡಿ ವಕೀಲರಿಂದ:**

ಪಾರ್ವತೆವ್ವ ಯಾವಾಗ ಮರಣ ಹೊಂದಿದ್ದಾರೆ ನನಗೆ ಗೊತ್ತಿಲ್ಲ. ಪಾರ್ವತೆವ್ವನ ಗಂಡನ ಹೆಸರು ಸಂಕಪ್ಪ. ದಾವೆ ಸಲ್ಲಿಸಲು ನಾನೆ ಮಾಹಿತಿ ನೀಡಿದ್ದೇನೆ. ಪಾರ್ವತೆವ್ವ ಮೊದಲನೆ ಹೆಂಡತಿ ಮಗಳು ಎಂದು ಬರೆಸಿದ್ದು ಅವರ ತಾಯಿ ಹೆಸರು ಗೊತ್ತಿಲ್ಲ. ಮೂಲ ಪುರಷ ಸಂಗಪ್ಪನಿಗೆ ಪಾರ್ವತಿ ಹಾಗೂ ಎರಡನೆ ಹೆಂಡತಿ ಮಗ ಚನ್ನಬಸಪ್ಪ ಎಂಬ ಎರಡು ಜನ ಮಕ್ಕಳು. ಚನ್ನಬಸಪ್ಪನ ಎರಡನೆ ಹೆಂಡತಿ ಮಗ ಎನ್ನುವ ಬಗ್ಗೆ ದಾಖಲೆಗಳನ್ನು ಹಾಜರ

ಪಡಿಸಿಲ್ಲ. ನನಗೆ ಮೂಲ ಪುರಷ ಸಂಗಪ್ಪನಿಗೆ ಎಷ್ಟು ಜನ ಮಕ್ಕಳು ಎನ್ನುವದರ ಬಗ್ಗೆ ಸರಿಯಾದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ವಾದ ಪತ್ರದೊಂದಿಗೆ ಹಾಜರ ಪಡಿಸಿದ ವಂಶಾವಳಿ ನಮ್ಮ ಅನುಕೂಲಕ್ಕೆ ತಕ್ಕಂತೆ ಬರೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಮೂಲ ಪುರುಷ ಸಂಗಪ್ಪನ ಮಗಳು ನೀಲವ್ವ ಕೋಂ ಸಂಗಯ್ಯ ಪೂಜಾರ ಇವಳನ್ನು ದಾವೆಯಲ್ಲಿ ನಾವು ಸೇರಿಸಿಲ್ಲ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪಾರ್ವತೆವ್ವ, ಚನ್ನಬಸಪ್ಪ ಹಾಗೂ ನೀಲವ್ವ ಒಂದೆ ತಾಯಿ ಮಕ್ಕಳಾಗಿದ್ದರೂ ಕೂಡಾ ನನಗೆ ಸರಿಯಾದ ಮಾಹಿತಿ ಇಲ್ಲದಿರುವುದರಿಂದ ತಪ್ಪು ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ. ನೀಲವ್ವ ಈಗಲೂ ಸಹ ಜೀವಂತವಾಗಿದ್ದರೂ ಕೂಡಾ ಅವಳನ್ನು ಪಕ್ಷಗಾರಳನ್ನಾಗಿ ಸೇರಿಸಿಲ್ಲ ಅಂದರೆ ಸರಿಯಲ್ಲ.

ಪಾರ್ವತೆವ್ವ ಹಾಗೂ ನೀಲವ್ವ ಇವರು ದಿನಾಂಕ 01.06.1971 ರಂದು ತಮ್ಮ ಪಾಲಿನ ಹಕ್ಕನ್ನು ಚನ್ನಬಸಪ್ಪನಿಗೆ ಬಿಟ್ಟುಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ನಮಗೆ ಈ ವಿಷಯ ಗೊತ್ತಿರುವುದರಿಂದ ಪಾರ್ವತೆವ್ವನ ವಾರಸುದಾರರು ಯಾರು ಪಾಲು ಕೇಳಿಲ್ಲ ಅಂದರೆ ಸರಿಯಲ್ಲ. ನಿಂಗವ್ವ ಹಾಗೂ ಬಸವಣ್ಣೆಪ್ಪನಿಗೆ ಎಷ್ಟು ಜನ ಮಕ್ಕಳು ಎನ್ನುವದನ್ನು ವಂಶಾವಳಿಯಲ್ಲಿ ಸರಿಯಾಗಿ ತೋರಿಸಿಲ್ಲ ಅಂದರೆ ಸರಿಯಲ್ಲ. ನಿಂಗವ್ವನ ಹೆಣ್ಣುಮಕ್ಕಳನ್ನು ದಾವೆಯಲ್ಲಿ ಉದ್ದೇಶಪೂರ್ಕವಾಗಿ ಸೇರಿಸಿಲ್ಲ ಅಂದರೆ ಸರಿಯಲ್ಲ.

ನಾನು ದಾವಾ ಆಸ್ತಿಗಳನ್ನು ನೋಡಿದ್ದೇನೆ. ಅದರಲ್ಲಿ ಯಾವ ಬೆಳೆ ಬೆಳೆದಿದ್ದಾರೆ ಗೊತ್ತಿಲ್ಲ. ದಾವಾ ಆಸ್ತಿಗಳ ಚಕ್ಕಬಂದಿಯನ್ನು ದಾವೆಯಲ್ಲಿ ನಮೂದಿಸಿಲ್ಲ ಅಂದರೆ ನಿಜ. ನನಗೆ ದಾವಾ ಆಸ್ತಿಗಳ ಬಗ್ಗೆ ಯಾವುದೆ ಮಾಹಿತಿ ಇಲ್ಲದಿದ್ದರೂ ಕೂಡಾ 3ನೇ ಪ್ರತಿವಾದಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಮನೆ ಆಸ್ತಿಗಳ ಚಕ್ಕಬಂದಿಯನ್ನು ದಾವೆಯಲ್ಲಿ ತಿಳಿಸಿಲ್ಲ, ಮನೆ ಆಸ್ತಿಗಳಲ್ಲಿ ಯಾರು ವಾಸವಾಗಿದ್ದಾರೆ ಗೊತ್ತಿಲ್ಲ. ಮೂಲ ಪುರಷ ಸಂಗಪ್ಪ ಹಾಗೂ ಆತನ ಸಹೋದರರ ಮದ್ಯ ಇದುವರೆಗೆ ಪಾಲು ಆಗಿಲ್ಲ ಅಂದರೆ ಸರಿಯಲ್ಲ. ಸಂಗಪ್ಪನ ಸಹೋದರರನ್ನು ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೆ ಹಕ್ಕು ಇರುವುದಿಲ್ಲ ಆದ್ದರಿಂದ ಪ್ರತಿವಾದಿಯರಿಂದ ಪಾಲು ಕೇಳುವ ಪ್ರಶ್ನೆ ಬರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿ ಜಮೀನುಗಳಲ್ಲಿ ವಾದಿಯರು ಹಾಗೂ ಪ್ರತಿವಾದಿಯರ ಹೆಸರುಗಳು ದಾಖಲ ಇರುತ್ತವೆ. ನಮ್ಮ ತಾಯಿಯ ಹೆಸರು ಕೂಡಾ ಉತಾರದಲ್ಲಿ ದಾಖಲ ಇರುತ್ತದೆ. ಪಹಣಿ ಪತ್ರಿಕೆಯನ್ನು ನೋಡಿ ಸಾಕ್ಷಿ ನಿಂಗವ್ವ ಯಲಿವಾಳ ಎಂದು ದಾಖಲ ಇರುತ್ತದೆ. ಅಂಗಡಿ ಹಾಗೂ ಯಲಿವಾಳ ಬೇರೆ ಬೇರೆ ಆಗಿದ್ದು ನಮಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಲಿವಾಳ ರೂಡಿ ನಾಮ. ದಾಖಲೆಗಳಲ್ಲಿ ಅಂಗಡಿ ಎಂದು ಇರುತ್ತದೆ. ನಮ್ಮ ತಾಯಿ ಹೆಸರು ಪಹಣಿ ಪತ್ರಿಕೆಯಲ್ಲಿ ದಾಖಲ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಲಿವಾಳ ಹಾಗೂ ಅಂಗಡಿ ನಮ್ಮ ಅಡ್ಡ ಹೆಸರು ಎಂದು ತೋರಿಸಲು ದಾಖಲೆ ಹಾಜರ ಪಡಿಸಿಲ್ಲ. ನಮ್ಮ ತಾಯಿಯ ಮರಣ ಪ್ರಮಾಣ ಪತ್ರವನ್ನು ಹಾಜರ ಪಡಿಸಿಲ್ಲ. ಮರಣ ಪ್ರಮಾಣ ಪತ್ರದಲ್ಲಿ

ಯಲಿವಾಳ ಎಂದು ಇರುವುದರಿಂದ ಅದನ್ನು ಉದ್ದೇಶಪೂರ್ಕವಾಗಿ ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ.

ಮನೆ ಆಸ್ತಿಗಳ ಕ್ಷೇತ್ರ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳು ಕೆಂಚಪ್ಪನಿಗೆ ಯಾವ ರೀತಿಯಾಗಿ ಬಂದಿವೆ ಎಂದು ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರದ ಬಗ್ಗೆ ಗೊತ್ತಿದೆ. ತಮ್ಮ ಪ್ರತಿವಾದ ಪತ್ರದಲ್ಲಿ ಪಾರ್ವತೆವ್ವ ಹಾಗೂ ನೀಲವ್ವ ಇವರು ಚನ್ನಬಸಪ್ಪನಿಂದ ಹಣ ಹಾಗೂ ಬಂಗಾರದ ರೂಪದಲ್ಲಿ ಪಡೆದುಕೊಂಡು ತಮ್ಮ ಆಸ್ತಿಗಳನ್ನು ತಮ್ಮ ಸಹೋದರರಿಗೆ ಬಿಟ್ಟುಕೊಟ್ಟಿದ್ದಾರೆಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಮಾರುಕಟ್ಟೆ ಮೌಲ್ಯ ಉದ್ದೇಶಪೂರ್ಕವಾಗಿ ಹೆಚ್ಚು ತೋರಿಸಿದ್ದೇವೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸಲು ಯಾವುದೆ ವ್ಯಾಜ್ಯ ಕಾರಣ ಉಂಟಾಗದಿದ್ದರೂ ಕೂಡಾ ಡಿಸೆಂಬರ 2023 ರಲ್ಲಿ ಕಾರಣ ಉಂಟಾಗಿದೆ ಎಂದು ಸುಳ್ಳು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೆ ಹಕ್ಕು ಇಲ್ಲದಿದ್ದರೂ ಕೂಡಾ 3ನೇ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಹಿಸ್ಸೆ ಇರುವುದಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.